ಖಣದ ಕುಪ್ಪುಸ, ಬುಟ್ಟಿ ಹೊತ್ತು ಹೊತ್ತು ಲೋಹದಂತೆ ಗಟ್ಟಿಯಾದ ತೋಳುಗಳ ಭುಜ, ಸದಾ ನಗು ತುಟಿಗಳಲ್ಲಿ. ಏನೋ ಸೆಳೆತವಿತ್ತು ಅವಳಲ್ಲಿ. ಮೊದಲ ಬಾರಿ ನಾನು, 'ಹಾಲು ಗಟ್ಟಿ ಹಾಕವ್ವ' ಎಂದು ರೂಢಿಯ ಮಾತು ಆಡಿದ್ದಕ್ಕೆ ಸಿಟ್ಟಾಗಿ ಬಿಟ್ಟಿದ್ದಳು ಅವಳು. 'ಹಾಲು ಕುಡದು ಬೆಳದು ದೊಡ್ಡವು ಆಗತಾವ್ರಿ ಓಣಿ ಕೂಸುಗಳು, ಅಂಥಾ ಇಂಥಾ ಹಾಲು ಕೊಟ್ರ ಆ ಶಿವಾ ಮೆಚ್ಚ್ಯಾನ್ರಿ?' ಎಂದು ಬುಟ್ಟಿ ಹೊತ್ತು ಸರಸರ ನಡೆದು ಹೋದವಳು ಎರಡೆರಡು ಕಂದಮ್ಮಗಳನ್ನು ಗರ್ಭದಲ್ಲಿಯೇ ಕಳಕೊಂಡ ದುರ್ದೈವಿಯೆಂದು ನನಗೆಲ್ಲಿ ಆಗ ತಿಳಿದಿತ್ತು?

ಎಷ್ಟು ಅಂತಃಕರಣದ ಜೀವಿಯೋ ಅಷ್ಟೂ ಭಾವುಕಳು ಯಶೋದೆ. ಮುಂಗಾರು ಮಳೆ ಬಿದ್ದು ನಳನಳಿಸುವ ತನ್ನ ಜೋಳದ ಹೊಲದ ವರ್ಣನೆ ಮಾಡುತ್ತ ಅರಳುವ ಮೊಗ ಹೊಲದತ್ತ ಕಣ್ಣು ಕೂಡಾ ಹಾಯಿಸದ ಗಂಡ ನಿಂಗಪ್ಪನ ಮಾತು ಬಂತೆಂದರೆ ಕೆಂಡವಾಗುತ್ತದೆ. ಒಮ್ಮೆಲೆ ಬೀಸುತ್ತಿದ್ದ ತಂಗಾಳಿ ನಿಂತು ಗುಡುಗು ಮಿಂಚಿನ ಮಳೆ ಶುರುವಾದಂತೆ! 'ಆ ಕೆಂಪು ತೊಗಲಿನ ಪಾರವ್ವನ ಬೆನ್ನು ಹತ್ತ್ಯಾನ್ರಿ. ಹದಿನೆಂಟರ ಪೋರಿಯ ಬೆನ್ನು ಹತ್ತಿದವಗ ಹೊಲದ ಕಡೆ ನಿಗಾ ಉಳಿದೀತ್ರಿ?' ಅಂತಹುದರಲ್ಲೂ ನನಗೇಕೋ ಮನದಲ್ಲೇ ನಗು ಬಂದಿತ್ತು; ಇವಳ ಕೋಪ ಗಂಡ ಬೇರೆ ಹೆಣ್ಣಿನ ಬೆನ್ನು ಹತ್ತಿದ್ದಕ್ಕೋ ಇಲ್ಲಾ ಬೆನ್ನು ಹತ್ತಿದ ಹೆಣ್ಣಿನ ಬಣ್ಣ ಕೆಂಪಾಗಿದ್ದಕ್ಕೋ ಅಥವಾ ಅವಳ ಹದಿನೆಂಟರ ಯೌವನದ ಬಗೆಗೋ? ಒಂದೇ ಮಾತಿನಲ್ಲಿ ಎಷ್ಟೆಲ್ಲಾ ಹೇಳಿದ್ದ ಅವಳ ಮಾತು ಕೇಳಿ ನನ್ನ ಮುಖದಲ್ಲಿ ನಸುನಗು ಮೂಡಿರಬೇಕು, ಯಶೋದೆಯ ಮುಖದಲ್ಲಿ ರಂಗು ಕಂಡಿತ್ತು. 'ಅಕ್ಕಾರ ಎಲ್ಲಾರು ನಮ್ಮ ಸಾಹೇಬರಂಗ ಛಲೋ ಇರ್ತಾರಂದ್ರೀ. ನೀವು ನಶೀಬವಾನ ಇದ್ದೀರಿ, ಇಂಥಾ ಶ್ರೀ ರಾಮಚಂದ್ರನಂಥಾ ಗಂಡನ್ನ ಪಡದೀರಿ' ಎಂದು ವರಾಂಡದಲ್ಲಿ ಪೇಪರೋದುತ್ತ ನಮ್ಮ ಸಂಭಾಷಣೆಯನ್ನು ಆಸ್ವಾದಿಸುತ್ತಿದ್ದ ರವಿಯತ್ತ ಕೈ ತೋರಿದಾಗ ಅವನೂ ಕೆಂಪಾಗಿದ್ದ, ನಾನು ಗಟ್ಟಿಯಾಗಿ ನಕ್ಕಿದ್ದೆ.

ಅವಳಿಗೂ ನಿನಗೂ ಇದೆಂಥಾ ಸ್ನೇಹ ಸುಮಿ? ಅವಳಿರುವ ಜಗತ್ತಿನ ಮೌಲ್ಯಗಳು, ಬಡತನದ ಬವಣೆ ನಿತ್ಯ ಬದಲಾಗಿಸುವ ಅವರ ಸಂಬಂಧಗಳು ನಿನಗೆ ಅರ್ಥವಾಗದವು ಎಂದು ಕೆಲವೊಮ್ಮೆ ರವಿ ನುಡಿಯುವುದಿದೆ. ಆಗೆಲ್ಲ ನಾನು 'ರವಿ ಈ ಯೂನಿವರ್ಸಿಟಿಯ ಸುವರ್ಣ ಪದಕ ವಿಜೇತೆ, ಕಾಲೇಜು ಲೆಕ್ಚರರ್, ಆಫೀಸರ ಪತ್ನಿ ಎಂಬೆಲ್ಲಾ ಮುಖವಾಡಗಳನ್ನು ಕಿತ್ತೆಸೆದಾಗ ನಾನೂ ಒಬ್ಬ ಯಶೋದೆಯೇ. ಅಷ್ಟಾಗಿ ಯಶೋದೆ ಅಂಥವಳಲ್ಲ. ಅವಳಲ್ಲಿ ಇನ್ನೂ ಎಂಥ ಬವಣೆಗೂ ಕರಗದ ಗಟ್ಟಿ ಮೌಲ್ಯಗಳಿವೆ' ಎಂದು ಆವೇಶದಿಂದ ನುಡಿದಿದ್ದೆ. 'ಮಾರಾಯ್ತಿ ನೀ ಬೇಕಾದ್ರೆ ಯಶೋದೆಯಾಗು. ನನ್ನ ಮಾತ್ರ ಆ ನಿಂಗಪ್ಪನ ಮಾಡಬೇಡ' ಎಂದು ನಗೆಯಾಡಿದ್ದ ರವಿ.

ಹೀಗೇ ಏನೇನೋ ಯೋಚನೆಯಲ್ಲಿ ಮುಳುಗಿ ನಿಂತವಳಿಗೆ ಯಶೋದೆ ಬುಟ್ಟಿ ಏರಿಸಲು ಹೇಳಿದ್ದೂ ಅರಿವಾಗಲಿಲ್ಲ "ಅಕ್ಕಾರ ನಿಂಗಪ್ಪಗ ಮೈಯಾಗ ಜೋರು ಉರಿ ಬಂದಾವ, ಕೆಮ್ಮು ಬ್ಯಾರೆ ಕೂಡಿಕೊಂಡೈತಿ. ಸಿವಿಲ್ ದವಾಖಾನಿಗೆ ಕರಕೊಂಡು ಹೋಕ್ಕೀನ್ರಿ ಇಂದ. ನಾಳೆ ಹಾಲು ಹಾಕಾಕ ನಾ ಬರಂಗಿಲ್ರಿ. ನಮ್ಮ ಅತ್ತಿಗಿ ಮಗಾ ಸಿದ್ದನ್ನ ಕಳಿಸಿಕೊಡತೇನ್ರಿ." ಒಮ್ಮೆಲೆ ಗಂಡನ ಬಗೆಗೆ ಬೆಣ್ಣೆಯಂತಾದ ಅವಳ ಮನಸ್ಸೇ ಅರ್ಥವಾಗದೆ ದಿಗಿಲಿನಿಂದ ದಿಟ್ಟಿಸುತ್ತಿದ್ದ ನನ್ನ ಮನಸ್ಸನ್ನು ಓದಿದಂತೆ ನುಡಿದಳು, "ಅಕ್ಕಾರ ಬೆರಳಿಗೆ ಗಾಯ ಆತಂದ್ರ ಕತ್ತರಿಸಿ ಒಗೀತೇವೇನ್ರಿ? ನೀವಽ ಹೇಳ್ರಿ ಪಟ್ಟಿ ಕಟಗೊಂಡು ಏನರೇ ಮಾಡಿ ಸಂಭಾಳಸ್ತೀವಿ, ಅಷ್ಟೇ ಅಲ್ಲ ಹೊಟ್ಟಿಲೀ ಹುಟ್ಟಿದ ಮಕ್ಕಳು ಇನ್ನೂ ಎಂಥೆಂಥಾ ತಪ್ಪು ಮಾಡತಾವಲ್ಲಾ, ಆಗ ಸಹಜ ಕ್ಷಮಾ ಮಾಡ್ತೇವೋ ಇಲ್ರಿ? ಕೈ ಹಿಡಿದಾಂವ ತಪ್ಪು ಮಾಡಿದ್ರ ಕ್ಷಮಾ ಮಾಡಬಾರದು ಅಂತ ಯಾವ ಕಾನೂನಿನ ಪುಸ್ತಕದಾಗ